**ಶ್ರೀ.ಹನುಮಪ್ಪ ಬಿನ್ ಶ್ರೀ.ಲೇಟ್ ಚಿಕ್ಕಮಾರಪ್ಪ ಇವರು ಸರ್ವೇ ನಂ. 59, ಸೂಲಿವಾರ ಗ್ರಾಮ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇಲ್ಲಿ ಒಟ್ಟು 02.15 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 2 ಲಕ್ಷ ಟನ್‌ಗಳಷ್ಟು ಕಟ್ಟಡ ಕಲ್ಲು ಕ್ವಾರಿ ಗಣಿಗಾರಿಕೆಯನ್ನು ತೆರೆದ & ಅರೆ-ಯಾಂತ್ರಿಕೃತ ಪದ್ಧತಿಯ (Semi- Mechanised Method) ಪ್ರಕಾರ ಗಣಿಗಾರಿಕೆ ಮಾಡುವ ಸಲುವಾಗಿ ದಿನಾಂಕ: 02/09/2022 ರಂದು ಮಧ್ಯಾಹ್ನ 12.00 ಕ್ಕೆ ಮಾನ್ಯ ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ ಇವರ ಅಧ್ಯಕ್ಷತೆಯಲ್ಲಿ ನಡೆದ ಪರಿಸರ ಸಾರ್ವಜನಿಕ ಸಭೆಯ ನಡಾವಳಿಗಳು.**

| | |
|---|---|
| **ಸ್ಥಳ** | ಸರ್ವೇ ನಂ. 59, ಸೂಲಿವಾರ ಗ್ರಾಮ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ |
| **ಸಮಯ** | ಮಧ್ಯಾಹ್ನ 12.00 ಘಂಟೆಗೆ |

| **ಸಾರ್ವಜನಿಕ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು** | |
|---|---|
| **ಕ್ರಮ ಸಂಖ್ಯೆ** | **ಹೆಸರು ಮತ್ತು ಪದನಾಮ** |
| 1. | ಶ್ರೀ.ರಘುನಂದನ್.ಎ.ಎನ್. ಕೆ.ಎ.ಎಸ್<br>ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪ ವಿಭಾಗ ಹಾಗೂ ಪರಿಸರ ಸಾರ್ವಜನಿಕ ಸಭೆಯ ಅಧ್ಯಕ್ಷರು. |
| 2. | ಶ್ರೀ. ವಾಸುದೇವ್.ಎಸ್.ಕೆ.<br>ಹಿರಿಯ ಪರಿಸರ ಅಧಿಕಾರಿಗಳು, ಬೆಂಗಳೂರು ದಕ್ಷಿಣ ವಲಯ,<br>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ,<br>ಬೆಂಗಳೂರು. |
| 3. | ಶ್ರೀ. ಎಸ್.ದಿನೇಶ್,<br>ಪರಿಸರ ಅಧಿಕಾರಿಗಳು,<br>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ,<br>ಪ್ರಾದೇಶಿಕ ಕಛೇರಿ, ರಾಜರಾಜೇಶ್ವರಿ ನಗರ.<br>ಬೆಂಗಳೂರು. |
| 4. | ಡಾ.ನವೀನ್. ಡಿ.<br>ಉಪ ಪರಿಸರ ಅಧಿಕಾರಿಗಳು,<br>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ<br>ಪ್ರಾದೇಶಿಕ ಕಛೇರಿ, ರಾಜರಾಜೇಶ್ವರಿ ನಗರ.<br>ಬೆಂಗಳೂರು. |
| 5. | ಶ್ರೀ.ಶಿವರಾಮ್ ಎಸ್.ಕೆ.<br>ಸಹಾಯಕ ನಿದೇಶಕರು,<br>ಜಿಲ್ಲಾ ಕೈಗಾರಿಕಾ ಕೇಂದ್ರ,<br>ಬೆಂಗಳೂರು ನಗರ ಜಿಲ್ಲೆ. |

| | |
|---|---|
| 6 | ಡಾ.ವೈಭವ್.ಕೆ.<br>ಗಣಿ ಮತ್ತು ಭೂ ವಿಜ್ಞಾನ ಇಲಾಖೆ,<br>ಬೆಂಗಳೂರು ನಗರ ಜಿಲ್ಲೆ. |
| 7 | ಶ್ರೀಮತಿ.ವಿಜಯ ಲಕ್ಷ್ಮಿ.ಜಿ.<br>ಗಣಿ ಮತ್ತು ಭೂ ವಿಜ್ಞಾನ ಇಲಾಖೆ,<br>ಬೆಂಗಳೂರು ನಗರ ಜಿಲ್ಲೆ. |
| 8 | ಶ್ರೀ.ನಿಸಾರ್ ಅಹಮದ್.<br>ಗಣಿ ಮತ್ತು ಭೂ ವಿಜ್ಞಾನ ಇಲಾಖೆ,<br>ಬೆಂಗಳೂರು ನಗರ ಜಿಲ್ಲೆ. |
| 9 | ಶ್ರೀಮತಿ.ನೀಲವ್ವ ಅಂ ಹಳ್ಳಿ.<br>ಪಂಚಾಯತ್ ಅಭಿವೃದ್ಧಿ ಅಧಿಕಾರಿ,<br>ಚಿಕ್ಕನಹಳ್ಳಿ ಗ್ರಾಮ ಪಂಚಾಯತ್, ತಾವರೆಕೆರೆ ಹೋಬಳಿ,<br>ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ. |

| **ಗಣಿ ಉದ್ದಿಮೆದಾರರು ಹಾಗೂ ಅವರ ಪರವಾಗಿ ಹಾಜರಿದ್ದವರು** | |
|---|---|
| **ಕ್ರಮ ಸಂಖ್ಯೆ** | **ಹೆಸರು, ಪದನಾಮ ಮತ್ತು ವಿಳಾಸ** |
| 1. | ಶ್ರೀ.ಹನುಮಪ್ಪ ಬಿನ್ ಶ್ರೀ.ಲೇಟ್ ಚಿಕ್ಕಮಾರಪ್ಪ<br>ಮಾಲೀಕರು,<br>ಸರ್ವೆ ನಂ. 59, ಸೂಲಿವಾರ ಗ್ರಾಮ,<br>ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು<br>ಬೆಂಗಳೂರು ನಗರ ಜಿಲ್ಲೆ. |
| 2. | ಶ್ರೀ. ಧನರಾಜ್ ಬಿ.ಎನ್.<br>ಯೋಜನಾ ಸಲಹೆಗಾರರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ,<br>ಮೆ.ಹಾರಿಝೋನ್ ವೆಂಚರ್ಸ್, ನಂ.04, ಮೂರನೇ ಮಹಡಿ, ಅನಘ,<br>ದೇವಸಂದ್ರ, ನ್ಯೂ ಬಿ.ಎಲ್ ರಸ್ತೆ,<br>ಬೆಂಗಳೂರು. |

ಶ್ರೀ.ಹನುಮಪ್ಪ ಬಿನ್ ಶ್ರೀ.ಲೇಟ್ ಚಿಕ್ಕಮಾರಪ್ಪ ಇವರು ಸರ್ವೆ ನಂ. 59, ಸೂಲಿವಾರ ಗ್ರಾಮ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾದ ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಉದ್ದೇಶಿತ ಕಲ್ಲುಗಣಿಗಾರಿಕೆಯ ಸ್ಥಳದ ಸುತ್ತಮುತ್ತಲಿನ ಹಳ್ಳಿಗಳ ನಿವಾಸಿಗಳು, ಪರಿಸರವಾದಿಗಳು, ಪತ್ರಕರ್ತರು, ಸಾರ್ವಜನಿಕರು, ಚಿಕ್ಕನಹಳ್ಳಿ ಗ್ರಾಮ ಪಂಚಾಯತಿಯ ಚುನಾಯಿತ ಪ್ರತಿನಿಧಿಗಳು, ಸರ್ಕಾರೇತರ ಸಂಸ್ಥೆಗಳ ಸದಸ್ಯರುಗಳು, ವ್ಯವಸಾಯದಾರರು/ರೈತರು ಇವರುಗಳು ಪಾಲ್ಗೊಂಡಿದ್ದರು. ಹಾಜರಾತಿಯ ಪ್ರತಿಯನ್ನು **ಅನುಬಂಧ –1 ರಲ್ಲಿ** ಲಗತ್ತಿಸಿದೆ.

**ಪೀಠಿಕೆ:**

ಶ್ರೀ.ಹನುಮಪ್ಪ ಬಿನ್ ಶ್ರೀ.ಲೇಟ್ ಚಿಕ್ಕಮಾರಪ್ಪ ಇವರು ಸರ್ವೇ ನಂ. 59, ಸೂಲಿವಾರ ಗ್ರಾಮ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆಯ ಒಟ್ಟು 2.15 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 2 ಲಕ್ಷ ಟನ್‌ಗಳಷ್ಟು ಕಟ್ಟಡ ಕಲ್ಲು ಕ್ವಾರಿ ಗಣಿಗಾರಿಕೆಯನ್ನು ತೆರೆದ & ಅರೆ-ಯಾಂತ್ರಿಕೃತ ಪದ್ಧತಿಯ (Semi- Mechanised Method) ಪ್ರಕಾರ ಮಾಡಲು ಉದ್ದೇಶಿಸಿರುತ್ತಾರೆ.

ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಇವರು ಪರಿಸರ (ಸಂರಕ್ಷಣೆ) ಕಾಯ್ದೆ, 1986 ರಡಿಯಲ್ಲಿ ಪರಿಸರ ಆಘಾತ ಅಧ್ಯಯನದ ಅಧಿಸೂಚನೆ, 2006 (ದಿನಾಂಕ: 14.09.2006, ತಿದ್ದುಪಡಿ ದಿನಾಂಕ :01.12.2009)ನ್ನು ಜಾರಿಗೊಳಿಸಿದ್ದು, ಇದರ ಅನ್ವಯ ಸದರಿಯವರ ಉದ್ದೇಶಿತ ಯೋಜನೆಯು ಬಿ–1 ಯೋಜನೆಗೆ ಒಳಪಡುವುದರಿಂದ ಉದ್ದೇಶಿತ ಯೋಜನೆಗೆ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ ಮತ್ತು ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ.

ದಿನಾಂಕ: 14.02.2021 ರ 270 ನೇ SEAC ಸಭೆಯಲ್ಲಿ ಸದರಿ ಕಟ್ಟಡ ನಿರ್ಮಾಣ ಕಲ್ಲುಗಳ ಕ್ವಾರಿ ಯೋಜನೆಯನ್ನು ಪರಿಗಣಿಸಿರುತ್ತದೆ. ಪರಿಸರ ಆಘಾತ ಅಧ್ಯಯನದ (EIA) ಮತ್ತು EIA/EMP ಅಧ್ಯಯನಗಳನ್ನು ನಡೆಸಿ ವರದಿಗಳನ್ನು ಸಿದ್ದಪಡಿಸಲು ಪರಿಸರ ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ (SEIAA), ಕರ್ನಾಟಕ, ಇವರ Terms of Reference (ToR) ಪತ್ರ ಸಂಖ್ಯೆ SEIAA 634 MIN 2021 ದಿನಾಂಕ 14.01.2022 ರಂತೆ ಅಂತಿಮಗೊಳಿಸಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಲು ಕೋರುವಂತೆ ಯೋಜನಾ ಸಲಹೆಗಾರರಿಗೆ ತಿಳಿಸಿರುತ್ತಾರೆ. ಅದರಂತೆ, ಷರತ್ತು ಬದ್ಧ ನಿಬಂಧನೆಗಳನ್ನು ಪಾಲಿಸುವ ಸಲುವಾಗಿ ಶ್ರೀ.ಹನುಮಪ್ಪ ಬಿನ್ ಶ್ರೀ.ಲೇಟ್ ಚಿಕ್ಕಮಾರಪ್ಪ ಇವರು ತಯಾರಿಸಿದ ಪರಿಸರ ಆಘಾತ ಅಧ್ಯಯನದ ವರದಿ ಮತ್ತು ಕಾರ್ಯಕಾರಿ ಸಾರಾಂಶವನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಸಿದ್ದಪಡಿಸಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಿಕೊಡುವಂತೆ ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರಿಗೆ ದಿನಾಂಕ: 22.04.2022 ರಂದು ಮನವಿ ಸಲ್ಲಿಸಿರುತ್ತಾರೆ.

ಉದ್ದಿಮೆದಾರರ ಮನವಿ ಹಾಗೂ ಮಂಡಳಿಯ ಪತ್ರದನ್ವಯ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ದಿನಾಂಕ: 09.05.2022 ರಂದು ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರಿಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸೂಕ್ತ ದಿನಾಂಕ, ಸ್ಥಳ ಹಾಗೂ ಸಮಯವನ್ನು ನಿಗದಿಪಡಿಸಲು ಕೋರಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ದಿನಾಂಕ: 02.09.2022 ರಂದು ಬೆಳಿಗ್ಗೆ 11.00 ಗಂಟೆಗೆ ಯೋಜನಾ ಸ್ಥಳವಾದ ಸರ್ವೇ ನಂ. 59, ಸೂಲಿವಾರ ಗ್ರಾಮ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇಲ್ಲಿ ಪರಿಸರ ಸಾರ್ವಜನಿಕ ಆಲಿಕೆ

ಸಭೆ ನಡೆಸಲು ಸಮ್ಮತಿ ನೀಡಿರುತ್ತಾರೆ. ಸದರಿ ಸಭೆಗೆ ಪೂರಕವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ರಾಜ್ಯದ ಪ್ರಮುಖ ಆಂಗ್ಲ ಮತ್ತು ಕನ್ನಡ ದಿನಪತ್ರಿಕೆಗಳಾದ ಕ್ರಮವಾಗಿ ಟೈಮ್ಸ್ ಆಫ್ ಇಂಡಿಯಾ ಹಾಗೂ ಹೊಸ ದಿಗಂತ ದಿನಪತ್ರಿಕೆಗಳಲ್ಲಿ ದಿನಾಂಕ: 02.08.2022 ರಂದು ಪ್ರಕಟಣೆ ನೀಡಿ ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರ ಅನಿಸಿಕೆ/ ಆಕ್ಷೇಪಣೆ/ ಸೂಚನೆ/ ಸಲಹೆ/ ಅಭಿಪ್ರಾಯಗಳನ್ನು ಲಿಖಿತವಾಗಿ 30 ದಿನಗಳ ಒಳಗಾಗಿ ಸಲ್ಲಿಸಲು ಕೋರಲಾಗಿರುತ್ತದೆ. ಅಲ್ಲದೇ, ಯೋಜನೆಗೆ ಸಂಬಂಧಿಸಿದ ಪರಿಸರ ಪರಿಣಾಮಗಳ ಮೌಲ್ಯಾಂಕನ ಮತ್ತು ಕಾರ್ಯಕಾರಿ ಸಾರಾಂಶದ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸಾರ್ವಜನಿಕರ ಪರಾಮರ್ಶೆಗೆ ಇರಿಸಲಾಗಿರುತ್ತದೆ.

- ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು ನಗರ ಜಿಲ್ಲೆ.
- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ.
- ಹಿರಿಯ ಪರಿಸರ ಅಧಿಕಾರಿಗಳು, ಬೆಂಗಳೂರು ದಕ್ಷಿಣ ವಲಯ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನಿಸರ್ಗ ಭವನ, ಬೆಂಗಳೂರು.
- ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಂಗಳೂರು ನಗರ ಜಿಲ್ಲೆ.
- ಗ್ರಾಮ ಪಂಚಾಯ್ತಿ ಕಛೇರಿ, ಚಿಕ್ಕನಹಳ್ಳಿ ಗ್ರಾಮ, ಬೆಂಗಳೂರು ನಗರ ಜಿಲ್ಲೆ,
- ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ – ರಾಜರಾಜೇಶ್ವರಿ ನಗರ.
- ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಮಹಡಿ, ನಂ. 49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು – 560 001.

ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು ತಮ್ಮ ಪರವಾಗಿ ಸಾರ್ವಜನಿಕ ಆಲಿಕೆ ಸಭೆಯನ್ನು ದಿನಾಂಕ : 02.09.2022 ರಂದು ನಡೆಸುವಂತೆ ಶ್ರೀ.ರಘುನಂದನ್.ಎ.ಎನ್ ಕೆ.ಎ.ಎಸ್, ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪ ವಿಭಾಗ, ಬೆಂಗಳೂರು ಇವರನ್ನು ನಾಮನಿರ್ದೇಶನ ಮಾಡಿ ಆದೇಶಿಸುತ್ತಾರೆ. ಸದರಿ ಆದೇಶದ ಪ್ರತಿಯನ್ನು **ಅನುಬಂಧ–2** ರಲ್ಲಿ ಲಗತ್ತಿಸಿದೆ.

ಮಾನ್ಯ ಸಹಕಾರ ಮಂತ್ರಿಗಳು, ಕರ್ನಾಟಕ ಸರ್ಕಾರ ಇವರು ದಿನಾಂಕ : 02.09.2022 ರಂದು ಕೈಗೊಂಡ ತಾವರೆಕೆರೆ ಹೋಬಳಿಯ ಪ್ರವಾಹ ಪೀಡಿತ ಪ್ರದೇಶಗಳ ಭೇಟಿಯಲ್ಲಿ ಶ್ರೀ.ರಘುನಂದನ್.ಎ.ಎನ್ ಕೆ.ಎ.ಎಸ್ ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪ ವಿಭಾಗ ಇವರು ಭಾಗವಹಿಸಿದ್ದ ಕಾರಣ ಪರಿಸರ ಸಾರ್ವಜನಿಕ ಸಭೆಯು ನಿಗದಿತ ಸಮಯ ಬೆಳಗ್ಗೆ 11.00 ಗಂಟೆಗೆ ಬದಲಾಗಿ ಮಧ್ಯಾಹ್ನ 12.00 ಗಂಟೆಗೆ ಮಾನ್ಯ ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪ ವಿಭಾಗ ಇವರ ಅಧ್ಯಕ್ಷತೆಯಲ್ಲಿ ಯೋಜನಾ

ಸ್ಥಳವಾದ ಸರ್ವೆ ನಂ. 59, ಸೂಲಿವಾರ ಗ್ರಾಮ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇಲ್ಲಿ ಪ್ರಾರಂಭವಾಯಿತು.

**ಸಾರ್ವಜನಿಕ ಸಭೆಯ ನಡಾವಳಿಗಳು:**

ಶ್ರೀ. ಎಸ್.ದಿನೇಶ್., ಪರಿಸರ ಅಧಿಕಾರಿಗಳು, ಪ್ರಾದೇಶಿಕ ಕಛೇರಿ, ರಾಜರಾಜೇಶ್ವರಿ ನಗರ ಇವರು ಪರಿಸರ ಸಾರ್ವಜನಿಕ ಸಭೆಯ ಅಧ್ಯಕ್ಷರು ಹಾಗೂ ಬೆಂಗಳೂರು ದಕ್ಷಿಣ ಉಪವಿಭಾಗದ ಉಪವಿಭಾಗಾಧಿಕಾರಿಗಳಾದ ಶ್ರೀ.ರಘುನಂದನ್.ಎ.ಎನ್.ಕೆ.ಎ.ಎಸ್ ಇವರನ್ನು ಸ್ವಾಗತಿಸಿದರು ಹಾಗೂ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಲು ಕೋರಿದರು. ಅಂತೆಯೇ, ಶ್ರೀ.ಎಸ್.ಕೆ.ವಾಸುದೇವ್, ವಲಯ ಹಿರಿಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ದಕ್ಷಿಣ ವಲಯ, ಬೆಂಗಳೂರು ಇವರನ್ನೂ ಸಹ ಸ್ವಾಗತಿಸಿದರು. ಸಭೆಯಲ್ಲಿ ಹಾಜರಿದ್ದ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಚಿಕ್ಕನಹಳ್ಳಿ ಗ್ರಾಮ ಪಂಚಾಯತಿಯ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು, ಉದ್ದೇಶಿತ ಯೋಜನೆಯ ಪ್ರತಿನಿಧಿಗಳನ್ನು, ಸಾರ್ವಜನಿಕರನ್ನು, ರಾಜ್ಯದ ಬೇರೆ ಬೇರೆ ಪ್ರದೇಶದಿಂದ ಆಗಮಿಸಿದ ಪರಿಸರವಾದಿಗಳು, ರೈತ ಬಾಂಧವರನ್ನು, ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳನ್ನು ಹಾಗೂ ಎಲ್ಲಾ ಮಾಧ್ಯಮ ಮಿತ್ರವರ್ಗದವರನ್ನು ಸ್ವಾಗತಿಸಿದರು.

ಶ್ರೀ.ಎಸ್.ಕೆ.ವಾಸುದೇವ್, ವಲಯ ಹಿರಿಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ದಕ್ಷಿಣ ವಲಯ ಇವರು ಉದ್ದೇಶಿತ ಯೋಜನೆಯ ಕುರಿತಂತೆ ಪ್ರಾಸ್ತಾವಿಕವಾಗಿ ಮಾತನಾಡಿ, ಸದರಿ ಪ್ರಸ್ಥಾಪಿತ ಯೋಜನೆಯು ಪರಿಸರ ಆಘಾತ ಅಧಿಸೂಚನೆ, 2006 ರ ಅಡಿಯಲ್ಲಿ ಬರುತ್ತದೆ ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಬೇಕಾಗಿರುವ ಕುರಿತು ನೆರೆದಿದ್ದ ಸಾರ್ವಜನಿಕರಿಗೆ ವಿವರಿಸಿದರು. ಮುಂದುವರಿದಂತೆ, ಸದರಿ ಉದ್ದೇಶಿತ ಯೋಜನೆಯ ಜಮೀನು ಕೇವಲ 2.15 ಎಕರೆ ವಿಸ್ತೀರ್ಣ ಹೊಂದಿದ್ದರೂ, 5 ಹೆಕ್ಟೇರ್ ಪ್ರದೇಶಕ್ಕಿಂತ ಹೆಚ್ಚಿನ ವಿಸ್ತೀರ್ಣವುಳ್ಳ ಪ್ರದೇಶದ ಜೊತೆ ಹೊಂದಿಕೊಂಡಿರುವುದರಿಂದ ಮಾನ್ಯ ಪರಿಸರ ಮತ್ತು ಅರಣ್ಯ ಮಂತ್ರಾಲಯ ಮತ್ತು ಹವಾಮಾನ ಬದಲಾವಣೆ ಇವರು ಹೊರಡಿಸಿರುವ ಕಛೇರಿಯ ಅಧಿಕೃತ ಜ್ಞಾಪನಾ ಪತ್ರ ದಿನಾಂಕ: 12.12.2018 ರಂತೆ ಪರಿಸರ ವಿಮೋಚನಾ ಪತ್ರ ಪಡೆಯಲು ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಶ್ರೀ.ಎಸ್.ಕೆ.ವಾಸುದೇವ್, ವಲಯ ಹಿರಿಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ದಕ್ಷಿಣ ವಲಯ ಇವರು ಮಾತನಾಡಿ ಸಾರ್ವಜನಿಕ ಆಲಿಕೆ ಸಭೆಯಲ್ಲಿ ಸಾರ್ವಜನಿಕರು ತಮ್ಮ ಅಭಿಪ್ರಾಯವನ್ನು ಲಿಖಿತವಾಗಿ ಅಥವಾ ಮೌಖಿಕವಾಗಿ ವ್ಯಕ್ತಪಡಿಸಬಹುದು ಹಾಗೂ ಇದನ್ನು ವೀಡಿಯೋಗ್ರಾಫ್ ಮಾಡಲಾಗುತ್ತದೆ ಎಂದು ತಿಳಿಸಿದರು. ಪ್ರಸ್ತಾವಿತ ಯೋಜನೆಯ ತಾಂತ್ರಿಕ ವಿವರಗಳನ್ನು ಪ್ರಸ್ತುತಪಡಿಸಲು ಗಣಿ ಉದ್ದಿಮೆದಾರರ ಯೋಜನಾ ಸಲಹೆಗಾರರಿಗೆ ತಿಳಿಸಿದರು.

ಅದರಂತೆ, ಗಣಿ ಉದ್ದಿಮೆದಾರರ ಯೋಜನಾ ಸಲಹೆಗಾರರು ಉದ್ದೇಶಿತ ಯೋಜನೆಯ ವಿವರಗಳನ್ನು ಶಕ್ತಿ ಬಿಂದು ಪ್ರಸ್ತುತಿಯ (Power Point Presentation) ಮೂಲಕ ವಿವರಿಸಲು ಪ್ರಾರಂಭಿಸಿದರು. ಏತನ್ಮಧ್ಯೆ, ಶ್ರಿ.ಬಸವರಾಜು, ಅಧ್ಯಕ್ಷರು, ಚಿಕ್ಕನಹಳ್ಳಿ ಗ್ರಾಮ ಪಂಚಾಯತ್ ಇವರು ಮಧ್ಯ ಪ್ರವೇಶಿಸಿ ಸದರಿ ಸಾರ್ವಜನಿಕ ಪರಿಸರ ಆಲಿಕೆ ಸಭೆಯ ಕುರಿತಂತೆ ಕೈಗೊಂಡ ಪ್ರಚಾರದ ಬಗ್ಗೆ ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಯಾಗಿ, ಶ್ರೀ.ಎಸ್.ದಿನೇಶ್, ಪರಿಸರ ಅಧಿಕಾರಿ ಇವರು ಮಾತನಾಡಿ ಪರಿಸರ ಆಘಾತ ಅಧ್ಯಯನದ ಅಧಿಸೂಚನೆ, 2006 ರಂತೆ ಸದರಿ ಸಾರ್ವಜನಿಕ ಪರಿಸರ ಆಲಿಕೆ ಸಭೆಯ ಕುರಿತಂತೆ ಪ್ರಚಾರ ನೀಡಲು ರಾಜ್ಯದ ಪ್ರಮುಖ ದಿನಪತ್ರಿಕೆಗಳಲ್ಲಿ ಈಗಾಗಲೇ ಪ್ರಕಟಣೆ ನೀಡಲಾಗಿದೆ ಹಾಗೂ ಈ ಕುರಿತಂತೆ ಎಲ್ಲಾ ಅಗತ್ಯ ಕ್ರಮಗಳನ್ನು ವಹಿಸಲಾಗಿದೆ ಎಂದು ತಿಳಿಸಿದರು. ಅಲ್ಲದೇ, ಯೋಜನೆಗೆ ಸಂಬಂಧಿಸಿದ ಪರಿಸರ ಪರಿಣಾಮಗಳ ಮೌಲ್ಯಾಂಕನ ಮತ್ತು ಕಾರ್ಯಕಾರಿ ಸಾರಾಂಶದ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿಗಳನ್ನು ಸಾರ್ವಜನಿಕರ ಪರಾಮರ್ಶೆಗೆ ಚಿಕ್ಕನಹಳ್ಳಿ ಗ್ರಾಮ ಪಂಚಾಯತಿ ಕಛೇರಿಯನ್ನೊಳಗೊಂಡಂತೆ ಇತರ ಸಂಬಂಧಿಸಿದ ಎಲ್ಲಾ ಇಲಾಖೆಗಳಲ್ಲಿ ಇರಿಸಲಾಗಿತ್ತೆಂದು ಸಭೆಗೆ ತಿಳಿಸಿದರು.

ಮುಂದುವರಿದಂತೆ, ಶ್ರಿ.ಬಸವರಾಜು, ಅಧ್ಯಕ್ಷರು, ಚಿಕ್ಕನಹಳ್ಳಿ ಗ್ರಾಮ ಪಂಚಾಯತ್ ಇವರಿಗೆ ಉದ್ದೇಶಿತ ಯೋಜನೆಯ ಕುರಿತಂತೆ ತಮ್ಮ ಯಾವುದೇ ಆಕ್ಷೇಪಣೆ/ಅನಿಸಿಕೆ ಮತ್ತು ಅಭಿಪ್ರಾಯಗಳನ್ನು ತಿಳಿಸಲು ಉದ್ದೇಶಿತ ಯೋಜನೆಯ ಯೋಜನಾ ಸಲಹೆಗಾರರು ಮಂಡಿಸುವ ಶಕ್ತಿ ಬಿಂದು ಪ್ರಸ್ತುತಿಯ (Power Point Presentation) ನಂತರ ಅವಕಾಶ ನೀಡಲಾಗುವುದೆಂದು ತಿಳಿಸಿದರು ಮತ್ತು ಯೋಜನಾ ಸಲಹೆಗಾರರಿಗೆ ಯೋಜನೆಯ ತಾಂತ್ರಿಕ ವಿವರಗಳನ್ನು ಪ್ರಸ್ತುತಪಡಿಸಲು ತಿಳಿಸಿದರು.

ಅಂತೆಯೇ, ಯೋಜನಾ ಸಲಹೆಗಾರರು ಶಕ್ತಿ ಬಿಂದು ಪ್ರಸ್ತುತಿಯನ್ನು (Power Point Presentation) ಮುಂದುವರಿಸಿ ಯೋಜನಾ ಪ್ರದೇಶದ ವಿವರ, ಯೋಜನೆಯ ಹಿನ್ನೆಲೆ, ಉತ್ಪಾದನೆಯ ಪ್ರಕ್ರಿಯೆ, ನೀರಿನ ಗುಣಮಟ್ಟ, ಭೂ–ಜಲದ ಗುಣಮಟ್ಟ, ಮಣ್ಣಿನ ಮಾದರಿಯ ಗುಣಮಟ್ಟ, ವಾಯು ಮಾಲಿನ್ಯ ಹಾಗೂ ಮಾಲಿನ್ಯ ನಿಯಂತ್ರಣದ ಕ್ರಮಗಳು, ಶಬ್ಧ ಮಟ್ಟದ ಹಾಗೂ ನಿಯಂತ್ರಿತ ಸ್ಫೋಟಗಳ ಬಳಕೆ, ಗಿಡಗಳನ್ನು ನೆಡುವುದು, ಅರಣ್ಯೀಕರಣ, ಜಲಚರಗಳ ಮೇಲಿನ ಪರಿಣಾಮ ಹಾಗೂ ಪರಿಹಾರ, ಭೂ ಪರಿಸರದ ಮೇಲೆ ಪರಿಣಾಮ ಹಾಗೂ ಪರಿಹಾರಗಳು, ಪರಿಸರ ಪರಿವೀಕ್ಷಣಾ ಕಾರ್ಯಕ್ರಮ, ಸಮಾಜಿಕ, ಆರ್ಥಿಕ, ಪರಿಸರ, ನೀರಿನ ಸಿಂಪಡಣೆ, ಮಳೆ ನೀರಿನ ಸಂಗ್ರಹಣೆ, ಉದ್ಯೋಗವಕಾಶ, ಸಾರ್ವಜನಿಕ ಆರೋಗ್ಯದ ಮೇಲಿನ ಪ್ರಭಾವ, ಜೈವಿಕ ಪರಿಸರದ ಮೇಲೆ ಆಗುವ ಪರಿಣಾಮ, ಕಂಟ್ರೋಲ್ ರೂಮ್‌ಗಳ ಬಳಕೆ, ತುರ್ತು ಪರಿಸ್ಥಿತಿ, ಸ್ಥಳೀಯ ಸಂಸ್ಥೆಗಳಿಗೆ ಉದ್ಯೋಗ, ಶಿಕ್ಷಣ ಇತ್ಯಾದಿ ಬಗ್ಗೆ ಸಿ.ಎಸ್.ಆರ್. ಹಾಗೂ ಸಿ.ಇ.ಆರ್ ಅಡಿಯಲ್ಲಿನ ಚಟುವಟಿಕೆಗಳಲ್ಲಿ ನಿಗಧಿ ಪಡಿಸಿದ ಹಣದ ಕುರಿತು ಸಂಕ್ಷಿಪ್ತವಾದ ರೀತಿಯಲ್ಲಿ ವಿವರಿಸಿದರು. ಇಲಾಖೆಗಳಿಂದ ಪಡೆದ ಅನುಮತಿ ಪತ್ರಗಳ ಬಗ್ಗೆ ತಿಳಿಸಿದರು. ಸದರಿ ಯೋಜನೆಯ ನೀಲಿ

ನಕ್ಷೆ, ಭೂಬಳಕೆ ಯೋಜನೆ ಇತ್ಯಾದಿ ಬಗ್ಗೆ ವಿವರಿಸಿದರು. ಶಕ್ತಿ ಬಿಂದು ಪ್ರಸ್ತುತಿಯ ಪ್ರತಿಯನ್ನು **ಅನುಬಂಧ –03** ರಲ್ಲಿ ಲಗತ್ತಿಸಿದೆ.

ಶಕ್ತಿ ಬಿಂದು ಪ್ರಸ್ತುತಿ ಪೂರ್ಣಗೊಂಡ ಬಳಿಕ ಬೆಂಗಳೂರು ದಕ್ಷಿಣ ಉಪ ವಿಭಾಗದ ಉಪವಿಭಾಗಾಧಿಕಾರಿಗಳಾದ ಶ್ರೀ.ರಘುನಂದನ್.ಎ.ಎನ್. ರವರು ಮಾತನಾಡಿ, ಸದರಿ ಉದ್ದೇಶಿತ ಯೋಜನೆಯ ಕುರಿತಂತೆ ತಮ್ಮ ಅಹವಾಲುಗಳು, ಅಭಿಪ್ರಾಯಗಳು, ಆಕ್ಷೇಪಣೆಗಳನ್ನು ಮೌಖಿಕವಾಗಿ ಅಥವಾ ಲಿಖಿತವಾಗಿ ಸಲ್ಲಿಸಬಹುದೆಂದು ಮತ್ತೊಮ್ಮೆ ಸಾರ್ವಜನಿಕರಿಗೆ ತಿಳಿಸಿದರು. ಸಾರ್ವಜನಿಕರು ಮೌಖಿಕವಾಗಿ ತಿಳಿಸುವ ಹಾಗೂ ಲಿಖಿತವಾಗಿ ಸಲ್ಲಿಸುವ ಕಳಕಳಿ/ಸಲಹೆ/ಅನಿಸಿಕೆ/ಅಭಿಪ್ರಾಯ/ ಸೂಚನೆಗಳನ್ನು ನಡವಳಿಯಲ್ಲಿ ದಾಖಲಿಸಿ ಸಭೆಯ ಅಧ್ಯಕ್ಷರಿಂದ ಅನುಮೋದಿಸಿ ಸಹಿ ಮಾಡಲಾದ ಸಾರ್ವಜನಿಕ ಸಭೆಯ ನಡವಳಿಗಳನ್ನು, ಛಾಯಚಿತ್ರ ಹಾಗೂ ವೀಡಿಯೋ ದಾಖಲಾತಿಗಳೊಂದಿಗೆ ಪರಿಸರ ಆಘಾತ ನಿರ್ಧರಣಾ ಪ್ರಾಧಿಕಾರಕ್ಕೆ (SEIAA) ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗುವುದೆಂದು ತಿಳಿಸಿದರು.

ಸಾರ್ವಜನಿಕರು ಯೋಜನೆಯ ಬಗ್ಗೆ ತಮ್ಮ ಅಭಿಪ್ರಾಯ/ಅನಿಸಿಕೆ/ಸಲಹೆ/ಕಳಕಳಿ/ಸೂಚನೆಗಳನ್ನು ಈ ಕೆಳಕಂಡಂತೆ ಮಂಡಿಸಿದರು.

1. **ಶ್ರೀ. ಮುತ್ತುರಾಜ್, ಗೊಲ್ಲಹಳ್ಳಿ ಗ್ರಾಮ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು:**

   ಸದರಿ ಉದ್ದೇಶಿತ ಯೋಜನೆಯ ಕುರಿತ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಆಯೋಜನೆ ಕುರಿತಂತೆ ಸ್ಥಳೀಯ ಗ್ರಾಮದ ನಿವಾಸಿಗಳಿಗೆ ಅರಿವಿಲ್ಲ ಮತ್ತು ಸದರಿ ಸಭೆಯ ಕುರಿತಂತೆ ಹೆಚ್ಚಿನ ಪ್ರಚಾರ ನೀಡಬೇಕಾಗಿತ್ತು ಎಂದು ತಿಳಿಸಿ, ಮುಂದಿನ ದಿನಮಾನಗಳಲ್ಲಿ ನಡೆಯುವ ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಹೆಚ್ಚಿನ ಪ್ರಚಾರ ನೀಡುವಂತೆ ಮನವಿ ಮಾಡಿದರು. ಸದರಿ ಉದ್ದೇಶಿತ ಯೋಜನೆಯ ಕುರಿತಂತೆ ಶಕ್ತಿ ಬಿಂದು ಪ್ರಸ್ತುತಿಯ ಮುಖಾಂತರ ತೋರಿಸಿದ ವಾಯು ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅನುಸರಿಸುವ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾ, ಉದ್ದೇಶಿತ ಯೋಜನೆಯ ಮಾಲೀಕರಿಂದ ಕೇವಲ ಶೇ.40 ರಷ್ಟು ಅನುಸರಣೆಯನ್ನು ನಿರೀಕ್ಷಿಸಬಹುದಾಗಿದ್ದು, ಉದ್ದೇಶಿತ ಗಣಿಗಾರಿಕೆಯಿಂದ ಉಂಟಾಗುವ ಧೂಳಿನಿಂದ ನಾವು ಬಳಲಬೇಕಾಗುತ್ತದೆ ಎಂದು ತಿಳಿಸಿದರು. ಸದರಿ ಯೋಜನೆಯ ಕುರಿತಂತೆ ಎಲ್ಲರ ಅಭಿಪ್ರಾಯವು ಮುಖ್ಯವಾಗಿದ್ದು, ಪ್ರಚಾರದ ಕೊರತೆಯಿಂದಾಗಿ ಕೆಲವೇ ಕೆಲವು ಸ್ಥಳೀಯ ಗ್ರಾಮಸ್ಥರು ಭಾಗವಹಿಸುವಂತಾಗಿದೆಯೆಂದು ತಿಳಿಸಿದರು. ಅಲ್ಲದೇ, ಸಭೆಯಲ್ಲಿ ಭಾಗವಹಿಸಿರುವ ಹೆಚ್ಚಿನವರು ಹೊರಭಾಗದವರಾಗಿದ್ದಾರೆ ಎಂದರು.

   ಪ್ರತ್ಯುತ್ತರವಾಗಿ, ಶ್ರೀ. ಎಸ್.ಕೆ.ವಾಸುದೇವ್, ವಲಯ ಹಿರಿಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ದಕ್ಷಿಣ ವಲಯ ಇವರು ಈಗಾಗಲೇ 30 ದಿನಗಳ ಮೊದಲೇ ಆಂಗ್ಲ ಮತ್ತು ಕನ್ನಡ ದಿನಪತ್ರಿಕೆಗಳಾದ ಕ್ರಮವಾಗಿ ಟೈಮ್ಸ್ ಆಫ್ ಇಂಡಿಯಾ ಹಾಗೂ ಹೊಸ ದಿಗಂತ ದಿನಪತ್ರಿಕೆಗಳಲ್ಲಿ ದಿನಾಂಕ: 02.08.2022 ರಂದು ಪ್ರಕಟಣೆ ನೀಡಲಾಗಿದೆ

ಹಾಗೂ ಎಲ್ಲಾ ಅಗತ್ಯ ಕ್ರಮಗಳನ್ನು ವಹಿಸಲಾಗಿದೆ ಎಂದು ತಿಳಿಸಿದರು. ಅಲ್ಲದೇ, ಯೋಜನೆಗೆ ಸಂಬಂಧಿಸಿದ ಪರಿಸರ ಪರಿಣಾಮಗಳ ಮೌಲ್ಯಾಂಕನ ಮತ್ತು ಕಾರ್ಯಕಾರಿ ಸಾರಾಂಶದ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿಗಳನ್ನು ಸಾರ್ವಜನಿಕರ ಪರಾಮರ್ಶೆಗೆ ಚಿಕ್ಕನಹಳ್ಳಿ ಗ್ರಾಮ ಪಂಚಾಯತಿ ಕಛೇರಿಯನ್ನೊಳಗೊಂಡಂತೆ ಇತರ ಸಂಬಂಧಿಸಿದ ಎಲ್ಲಾ ಇಲಾಖೆಗಳಲ್ಲಿ ದಿನಾಂಕ: 11.08.2022 ರಂದು ಇರಿಸಲಾಗಿತ್ತೆಂದು ಸಭೆಗೆ ತಿಳಿಸಿದರು. ಆದಾಗ್ಯೂ, ಸಭೆಯಲ್ಲಿ ವ್ಯಕ್ತವಾಗುವ ಎಲ್ಲಾ ಅಭಿಪ್ರಾಯಗಳು ಹಾಗೂ ಸಲಹೆಗಳನ್ನು ನಡಾವಳಿಗಳಲ್ಲಿ ದಾಖಲಿಸಲಾಗುತ್ತದೆ ಮತ್ತು ಅದನ್ನು ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸಿಕೊಡಲಾಗುತ್ತದೆ ಮತ್ತು ಭವಿಷ್ಯದಲ್ಲಿ ನಡೆಸಲಾಗುವ ಸಾರ್ವಜನಿಕ ಪರಿಸರ ಆಲಿಕೆ ಸಭೆಗೆ ವ್ಯಾಪಕ ಪ್ರಚಾರ ನೀಡುವ ನಿಟ್ಟಿನಲ್ಲಿ ಹೆಚ್ಚಿನ ಕಾಳಜಿ ತೆಗೆದುಕೊಳ್ಳಲಾಗುತ್ತದೆ ಎಂದು ತಿಳಿಸಿದರು.

ಶ್ರೀ.ಮುತ್ತುರಾಜ್, ಗೊಲ್ಲಹಳ್ಳಿ ಗ್ರಾಮ ಇವರು ಹೆಚ್ಚಿನ ಗ್ರಾಮಸ್ಥರು ಸುದ್ದಿ ಪತ್ರಿಕೆಗಳನ್ನು ಓದುವುದು ವಿರಳವಾಗಿರುವುದರಿಂದ ಸಾರ್ವಜನಿಕ ಪರಿಸರ ಆಲಿಕೆಯ ಸಭೆಯ ಬಗ್ಗೆ ಮಾಹಿತಿ ಲಭ್ಯವಾಗಿಲ್ಲವೆಂದು ತಿಳಿಸಿದರು.

2. **ಶ್ರೀ. ಧನರಾಜ್, ಗ್ರಾಮಸ್ಥರು, ಚಿಕ್ಕನಹಳ್ಳಿ ಗ್ರಾಮ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು.**

ಸದರಿ ಸಭೆಯಲ್ಲಿ ಉಪಸ್ಥಿತರಿದ್ದ ವಿವಿಧ ಇಲಾಖೆಗಳ ಅಧಿಕಾರಿಗಳನ್ನುದ್ದೇಶಿಸಿ ಸೂಲಿವಾರ ಗ್ರಾಮದಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ 15 ಗಣಿಗಾರಿಕೆಗಳ ಪೈಕಿ ಎಷ್ಟು ಗಣಿಕಾರಿಕೆಗಳು ನಿಯಮಗಳನ್ನು ಪಾಲಿಸುತ್ತಿವೆ ಎಂದು ಪ್ರಶ್ನಿಸಿದರು. ಸದರಿ ಗಣಿಗಾರಿಕೆಗಳ ಮಾಲೀಕರು ಬೇರೆ ಇಲಾಖೆಗಳ ಪರವನಿಗೆ ಪಡೆದಿದ್ದರೂ, ಚಿಕ್ಕನಹಳ್ಳಿ ಗ್ರಾಮ ಪಂಚಾಯತ್ ವತಿಯಿಂದ ಪಡೆಯಬೇಕಾಗಿರುವ ಸಾಮಾನ್ಯ ಪರವಾನಿಗೆಯನ್ನು ಪಡೆದಿರುವುದಿಲ್ಲ, ಇನ್ನೂ ಗ್ರಾಮ ಪಂಚಾಯತಿಗೆ ತೆರಿಗೆಯನ್ನೂ ಪಾವತಿಸಿರುವುದಿಲ್ಲ. ಈಗಾಗಿ, ಗ್ರಾಮ ಪಂಚಾಯತ್ ವತಿಯಿಂದ ಆರೋಗ್ಯ ಶಿಬಿರದಂತಹ ಜನಸಾಮಾನ್ಯರಿಗೆ ಅನುಕೂಲವಾಗುವಂತಹ ಯಾವುದೇ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಹ ಪರದಾಡುವಂತಾಗಿದೆ ಎಂದು ತಿಳಿಸಿದರು. ಆದ್ದರಿಂದ, ಎಲ್ಲಾ ಗಣಿಗಾರಿಕೆಯ ಮಾಲೀಕರುಗಳು ಸಂಬಂಧಪಟ್ಟ ಗ್ರಾಮ ಪಂಚಾಯತಿಯಿಂದ ಸಾಮಾನ್ಯ ಪರವಾನಿಗೆಯನ್ನು ಪಡೆಯುವುದನ್ನು ಕಡ್ಡಾಯಗೊಳಿಸುವಂತೆ ಹಾಗೂ ಸದ್ಯ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಗಣಿಗಾರಿಕೆಗಳು ನಿಯಮಗಳನ್ನು ಪಾಲಿಸುತ್ತಿರುವ ಕುರಿತಂತೆ ಪರಿಶೀಲನೆ ಕೈಗೊಳ್ಳಲು ವಿನಂತಿಸಿದರು.

ಇದಕ್ಕೆ ಉತ್ತರಿಸಿದ, ಶ್ರೀ.ಎಸ್.ಕೆ.ವಾಸುದೇವ್, ವಲಯ ಹಿರಿಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ದಕ್ಷಿಣ ವಲಯ ಇವರು ಕಲ್ಲುಗಣಿಗಾರಿಕೆಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ವತಿಯಿಂದ ಪರವಾನಿಗೆ ನೀಡಲಾಗುತ್ತಿದೆ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸಾರ್ವಜನಿಕ ಪರಿಸರ ಆಲಿಕೆಯ ಸಭೆಯ ಸದಸ್ಯ ಸಂಚಾಲಕರಾಗಿದ್ದು, ಸದರಿ ಸಭೆಯನ್ನು ಆಯೋಜಿಸುವ ಜವಾಬ್ದಾರಿ ಮಂಡಳಿಯದ್ದಾಗಿದೆ

ಹಾಗೂ ಶ್ರೀ. ಧನರಾಜ್, ಗ್ರಾಮಸ್ಥರು, ಚಿಕ್ಕನಹಳ್ಳಿ ಗ್ರಾಮ ಇವರು ತಿಳಿಸಿದ ಎಲ್ಲಾ ಅನಿಸಿಕೆಗಳನ್ನು ನಡಾವಳಿಗಳಲ್ಲಿ ನಮೂದಿಸಿ ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸಿಕೊಡಲಾಗುತ್ತದೆ ಎಂದು ತಿಳಿಸಿದರು. ಮುಂದುವರಿದಂತೆ, ಸದರಿ ಉದ್ದೇಶಿತ ಯೋಜನೆಯ ಪರಿಸರಕ್ಕೆ ಸಂಬಂಧಿಸಿದ ಅಂಶಗಳಿಗೆ ಕುರಿತಂತೆ ಮಾತ್ರ ಅನಿಸಿಕೆ/ಅಭಿಪ್ರಾಯ ಹಾಗೂ ಆಕ್ಷೇಪಣೆಗಳನ್ನು ವ್ಯಕ್ತಪಡಿಸುವಂತೆ ಸೂಚಿಸಿದರು.

ಮುಂದುವರಿದಂತೆ, ಶ್ರೀ. ಧನರಾಜ್, ಗ್ರಾಮಸ್ಥರು, ಚಿಕ್ಕನಹಳ್ಳಿ ಗ್ರಾಮ ಇವರು ಚಿಕ್ಕನಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಕಲ್ಲು ಗಣಿಗಾರಿಕೆಗಳು ಸಂಬಂಧಿಸಿದ ನಿಯಮಗಳನ್ನು ಅನುಸರಿಸುತ್ತಿರುವ ಕುರಿತಂತೆ ಪರಿಶೀಲನೆ ನಡೆಸಲು ಹಾಗೂ ಎಲ್ಲಾ ಕಲ್ಲು ಗಣಿಗಾರಿಕೆಗಳ ಮಾಲೀಕರು ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಿಂದ ಸಾಮಾನ್ಯ ಪರವಾನಿಗೆಯನ್ನು ಕಡ್ಡಾಯವಾಗಿ ಪಡೆಯುವಂತೆ ಸೂಚಿಸಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ನಿರ್ದೇಶನ ನೀಡುವಂತೆ ಹಾಗೂ ಸದರಿ ವಿಷಯದ ಕುರಿತಂತೆ ಸರ್ಕಾರದ ಗಮನಕ್ಕೆ ತರುವಂತೆ ಸಹ ಬೆಂಗಳೂರು ದಕ್ಷಿಣ ಉಪ ವಿಭಾಗದ ಉಪವಿಭಾಗಾಧಿಕಾರಿಗಳಿಗೆ ವಿನಂತಿಸಿದರು.

3. **ಶ್ರೀ. ಬಸವರಾಜು, ಅಧ್ಯಕ್ಷರು, ಚಿಕ್ಕನಹಳ್ಳಿ ಗ್ರಾಮ ಪಂಚಾಯತ್, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು.**

ಸದರಿಯವರು ಮಾತನಾಡಿ, ಸೂಲಿವಾರ ಗ್ರಾಮದಲ್ಲಿ ಸಾರ್ವಜನಿಕ ಪರಿಸರ ಆಲಿಕೆಯ ಸಭೆಯನ್ನು ಆಯೋಜಿಸಿದ್ದಕ್ಕಾಗಿ ಬೆಂಗಳೂರು ದಕ್ಷಿಣ ಉಪ ವಿಭಾಗದ ಉಪವಿಭಾಗಾಧಿಕಾರಿಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು. ಸದರಿ ಸಾರ್ವಜನಿಕ ಪರಿಸರ ಆಲಿಕೆಯ ಸಭೆಯ ಕುರಿತಂತೆ ನೀಡಿದ ಪ್ರಚಾರದ ಕೊರತೆಯ ಬಗ್ಗೆ ಮತ್ತೊಮ್ಮೆ ಪ್ರಸ್ತಾಪಿಸಿ, ಸದರಿ ಉದ್ದೇಶಿತ ಕಲ್ಲು ಗಣಿಗಾರಿಕೆಯ ಬಗ್ಗೆ ನಡೆಸುತ್ತಿರುವ ಸಾರ್ವಜನಿಕ ಪರಿಸರ ಆಲಿಕೆ ಸಭೆಯು ಕಾಯ್ದೆಯಡಿಯಲ್ಲಿ ಹೊಸದಾಗಿ ಜಾರಿಯಾಗಿರುವುದೋ ಅಥವಾ ಈ ಹಿಂದೆ ಚಾಲ್ತಿಯಲ್ಲಿರುವ ಬಗ್ಗೆ ಪ್ರಶ್ನಿಸಿದರು. ಪ್ರತಿಯಾಗಿ, ಶ್ರೀ.ಧನರಾಜ್.ಬಿ.ಎನ್., ಯೋಜನಾ ಸಲಹೆಗಾರರು ಉತ್ತರಿಸುತ್ತಾ, ಈ ಹಿಂದೆ ಕ್ಲಸ್ಟರ್ ಗಳಲ್ಲಿ 25 ಹೆಕ್ಟೇರ್‌ಗಿಂತ ಹೆಚ್ಚು ಪ್ರದೇಶದಲ್ಲಿ ಕ್ವಾರಿಗಳನ್ನು ಸ್ಥಾಪಿಸಿದ್ದಲ್ಲಿ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಲಾಗುತ್ತಿತ್ತು. ಆದರೆ, ಸೆಪ್ಟಂಬರ್, 2020 ರಲ್ಲಿ ಮಾನ್ಯ ಎನ್.ಜಿ.ಟಿ (ಮಾನ್ಯ ಹಸಿರು ನ್ಯಾಯಾಧಿಕರಣ) ವ್ರಿಟ್ ಪೆಟಿಷನ್‌ವೊಂದರ ವಿಚಾರಣೆಯಲ್ಲಿ ನೀಡಿದ ಆದೇಶದನ್ವಯ, 2013 ರ ಮೊದಲು ಲೀಸ್ ಹೊಂದಿರುವ ಹಾಗೂ ಅಸ್ತಿತ್ವದಲ್ಲಿರುವ ಕ್ವಾರಿಗಳನ್ನು ಹೊರತು ಪಡಿಸಿ ಯಾವುದೇ ಕ್ವಾರಿ ಘಟಕಗಳು ಕ್ಲಸ್ಟರ್ ಪ್ರದೇಶದಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದಲ್ಲಿ ಹಾಗೂ ಕ್ಲಸ್ಟರ್ ವಿಸ್ತೀರ್ಣವು 5 ಹೆಕ್ಟೇರ್ ಮೀರಿದ್ದಲ್ಲಿ ಪರಿಸರ ವಿಮೋಚನಾ ಪತ್ರ ಪಡೆಯಲು ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ ಎಂದು ತಿಳಿಸಿದರು.

ಶ್ರೀ. ಬಸವರಾಜು, ಅಧ್ಯಕ್ಷರು, ಚಿಕ್ಕನಹಳ್ಳಿ ಗ್ರಾಮ ಪಂಚಾಯತ್ ಇವರು ಉದ್ದೇಶಿತ ಕಲ್ಲು ಗಣಿಗಾರಿಕೆಯ ಪ್ರತಿಪಾದಕರಾದ ಶ್ರೀ.ಹನುಮಪ್ಪ ಬಿನ್ ಲೇಟ್ ಶ್ರೀ.ಚಿಕ್ಕಮಾದಪ್ಪ ಇವರ ಪರಿಚಯವೇ ಇಲ್ಲವೆಂದು ತಿಳಿಸಿ, ಗೊಟ್ಟಿಗೆರೆ ನಿವಾಸಿಯಾದ ಶ್ರೀ.ಹನುಮಪ್ಪ ಬಿನ್ ಲೇಟ್

ಶ್ರೀ.ಚಿಕ್ಕಮಾದಪ್ಪರವರನ್ನು ಸದರಿ ಕಲ್ಲುಗಣಿಗಾರಿಕೆಯ ಭೂಮಿಯ ಲಭ್ಯತೆಯ ಬಗ್ಗೆ ಯಾರಿಂದ ಮಾಹಿತಿಯನ್ನು ಪಡೆದರು ಹಾಗೂ ಯಾರಿಂದ ಭೂಮಿಯನ್ನು ಖರೀದಿಸಿದರು ಎಂದು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ, ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಇವರು ಶ್ರೀ.ಬಸವರಾಜುರವರಿಗೆ ಕೇವಲ ಉದ್ದೇಶಿತ ಯೋಜನೆಗೆ ಸಂಬಂಧಿಸಿದಂತೆ ಪರಿಸರಾತ್ಮಕ ಅಂಶಗಳಿಗೆ ಮಾತ್ರ ತಮ್ಮ ಅನಿಸಿಕೆ ಹಾಗೂ ಅಭಿಪ್ರಾಯಗಳನ್ನು ಸೀಮಿತಗೊಳಿಸುವಂತೆ ಸೂಚಿಸಿದರು.

ಮುಂದುವರಿದಂತೆ, ಶ್ರೀ. ಬಸವರಾಜು, ಅಧ್ಯಕ್ಷರು, ಚಿಕ್ಕನಹಳ್ಳಿ ಗ್ರಾಮ ಪಂಚಾಯತ್ ಇವರು ತಮ್ಮ ಕ್ವಾರಿಯನ್ನೂ ಒಳಗೊಂಡಂತೆ ಈಗಾಗಲೇ ಅಸ್ತಿತ್ವದಲ್ಲಿರುವ ಕಲ್ಲು ಕ್ವಾರಿ ಮಾಲೀಕರು ಕ್ವಾರಿ ಲೀಸ್ ಹಾಗೂ ಪರಿಸರ ವಿಮೋಚನಾ ಪತ್ರದಲ್ಲಿ ನಮೂದಿಸಿರುವ ಷರತ್ತುಗಳನ್ನು ಪಾಲಿಸುತ್ತಿರುವುದು ಕಳಪೆಯಾಗಿರುತ್ತದೆಯೆಂದು ಹಾಗೂ ಕೇವಲ ಶೇ.10 ರಷ್ಟು ಷರತ್ತುಗಳ ಅನುಸರಣೆ ಸಹ ಸಾಧಿಸಲಾಗಿಲ್ಲವೆಂದು ಹಾಗೂ ಚಾಲ್ತಿಯಲ್ಲಿರುವ ಕ್ವಾರಿಗಳ ಸುತ್ತಲೂ ಹಸಿರು ಹೊದಿಕೆ ಮಾಡಿಲ್ಲವೆಂದು ಮಾಹಿತಿ ನೀಡಿದರು. ಆದಕಾರಣ, ಈಗಾಗಲೇ ಅಸ್ತಿತ್ವದಲ್ಲಿರುವ ಎಲ್ಲಾ ಕಲ್ಲು ಕ್ವಾರಿ ಘಟಕಗಳನ್ನು ಪರಿಶೀಲನೆ ನಡೆಸಿ ಷರತ್ತುಗಳು ಅನುಸರಣೆಯಾಗಿರುವ ಬಗ್ಗೆ ಹಾಗೂ ಸದರಿ ಘಟಕಗಳಿಂದ ಪರಿಸರದ ಮೇಲೆ ಋಣಾತ್ಮಕ ಪರಿಣಾಮಗಳು ಹಾಗೂ ರಾಜಕಾಲುವೆಗಳ ಒತ್ತುವರಿಯನ್ನು ನಿಯಂತ್ರಿಸುವ ಬಗ್ಗೆ ಪರಿಶೀಲಿಸಬೇಕೆಂದು ಮನವಿ ಮಾಡಿದರು. ಇದಲ್ಲದೇ, ಕರ್ನಾಟಕ ವಿಧಾನಮಂಡಲ ಅಧೀನ ಶಾಸನ ರಚನಾ ಸಮಿತಿ ಸದಸ್ಯರುಗಳು ಇತ್ತೀಚೆಗೆ ಕ್ವಾರಿ ಘಟಕಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ, ಕ್ವಾರಿಗಳು ಪಂಚಾಯತ್ ರಾಜ್ ಕಾಯ್ದೆಯಡಿ ನಿರಾಪೇಕ್ಷಣಾ ಪತ್ರ ಪಡೆಯುವುದು ಕಡ್ಡಾಯ ಎಂದು ಅಭಿಪ್ರಾಯಪಟ್ಟಿರುವುದಾಗಿ ಸಭೆಗೆ ತಿಳಿಸಿದರು. ಮುಂದುವರಿದಂತೆ, ತೆರಿಗೆ ವಸೂಲಿಯ ವೇಳೆ ಕೆಲ ಕ್ವಾರಿ ಮಾಲೀಕರು ಗ್ರಾಮ ಪಂಚಾಯತಿ ಅಧಿಕಾರಿಗಳೊಂದಿಗೆ ಅಸಭ್ಯವಾಗಿ ನಡೆದುಕೊಳ್ಳುತ್ತಿರುವ ಬಗ್ಗೆ ಮಾಹಿತಿ ನೀಡಿದರು ಹಾಗೂ ಸ್ಥಳಿಯ ಗ್ರಾಮ ಪಂಚಾಯತಿಯಿಂದ ನಿರಾಪೇಕ್ಷಣಾ ಪತ್ರ ಪಡೆದಿದ್ದರೆ ಮಾತ್ರ ಕ್ವಾರಿಗಳಿಗೆ ಪರವಾನಿಗೆಯನ್ನು ನೀಡುವ ಬಗ್ಗೆ ಗಮನಹರಿಸುವಂತೆ ಕೋರಿದರು ಮತ್ತು ಪಂಚಾಯತ್ ರಾಜ್ ಕಾಯ್ದೆ ಮಿತಿಯಲ್ಲಿ ಬರುವ ಎಲ್ಲಾ ಚಟುವಟಿಗಳ ಬಗ್ಗೆ ಗ್ರಾಮ ಪಂಚಾಯತಿಯ ಗಮನಕ್ಕೆ ತರುವ ಬಗ್ಗೆ ಮನವಿ ಮಾಡಿದರು.

ಇದಕ್ಕೆ ಉತ್ತರಿಸಿದ ಉಪವಿಭಾಗಾಧಿಕಾರಿಗಳು, ಕ್ವಾರಿ ಮತ್ತು ಕ್ರಷರ್ ನಡೆಸಲು ಗ್ರಾಮ ಪಂಚಾಯತಿಯಿಂದ ಪರವಾನಿಗೆ ಪಡೆಯುವುದು ಕಡ್ಡಾಯವೆಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಶ್ರೀ.ಬಸವರಾಜುರವರು ಯಾವುದೇ ಕ್ವಾರಿ ಮತ್ತು ಕ್ರಷರ್ ಮಾಲೀಕರು ಗ್ರಾಮ ಪಂಚಾಯತಿ ವತಿಯಿಂದ ಎನ್.ಒ.ಸಿ ಪಡೆದಿಲ್ಲ ಅಲ್ಲದೇ, ಗ್ರಾಮ ಪಂಚಾಯತಿಯಿಂದ ಎನ್.ಒ.ಸಿ ಇಲ್ಲದೆಯೆ ಕ್ವಾರಿ ಗುತ್ತಿಗೆ ಮತ್ತು ನಮೂನೆ-ಸಿ ನೀಡಲಾಗಿದೆಯೆಂದು ಆರೋಪಿಸಿದರು. ಇದರಿಂದ ಸ್ಥಳೀಯರು ಗ್ರಾಮ ಪಂಚಾಯತಿಯನ್ನು ದೂಷಿಸುತ್ತಿರುವುದಾಗಿ ತಿಳಿಸಿದರು. ಅಲ್ಲದೇ, ತಮ್ಮನ್ನೂ ಒಳಗೊಂಡಂತೆ ಯಾವುದೇ ಕ್ವಾರಿ ಮಾಲೀಕರು ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿಯ

(CSR) ಅಡಿಯಲ್ಲಿ ಮೀಸಲಿರುವ ನಿಧಿಯನ್ನು ಸಮರ್ಪಕವಾಗಿ ಸಾಮಾಜಿಕ ಹಾಗೂ ಪರಿಸರಾತ್ಮಕ ಅಭಿವೃದ್ಧಿಗಳಿಗಾಗಿ ಬಳಸುತ್ತಿಲ್ಲವೆಂದು ತಿಳಿಸಿದರು.

ಮುಂದುವರಿದಂತೆ, ಶ್ರೀ.ಬಸವರಾಜುರವರು ಸದರಿ ಉದ್ದೇಶಿತ ಕಲ್ಲು ಗಣಿಗಾರಿಕೆ ಯೋಜನೆಗೆ ತಮ್ಮ ಕಡೆಯಿಂದ ಯಾವುದೇ ವಿರೋಧವಿಲ್ಲವೆಂದು ತಿಳಿಸುತ್ತಾ, ಈಗಾಗಲೇ ಹಾಲಿ ಇರುವ ಕ್ವಾರಿಗಳು ಷರತ್ತುಗಳನ್ನು ಉಲ್ಲಂಘಿಸಿದ್ದರಿಂದಾಗಿರುವ ಸಮಸ್ಯೆಗಳನ್ನು ಸರಿಪಡಿಸಬೇಕೆಂಬುವುದಷ್ಟೇ ತಮ್ಮ ಕಾಳಜಿಯಾಗಿದೆಯೆಂದು ತಿಳಿಸಿದರು ಹಾಗೂ ಎಲ್ಲಾ ಕ್ವಾರಿ ಮಾಲೀಕರು ಸ್ಥಳೀಯ ಗ್ರಾಮ ಪಂಚಾಯತಿಗೆ ಅಗತ್ಯವಾದ ತೆರಿಗೆಯನ್ನು ಪಾವತಿಸಬೇಕೆಂಬ ಅಂಶವನ್ನು ಹಾಗೂ ಈಗಾಗಲೇ ಸಭೆಯಲ್ಲಿ ಪ್ರಸ್ತುತಪಡಿಸಿರುವ ಕುಂದು ಕೊರತೆಗಳನ್ನು ಸದರಿ ಸಾರ್ವಜನಿಕ ಪರಿಸರ ಆಲಿಕೆ ಸಭೆಯ ನಡಾವಳಿಗಳಲ್ಲಿ ಸೇರಿಸಿ ಸಂಬಂಧಪಟ್ಟ ರಾಜ್ಯ ಹಾಗೂ ಕೇಂದ್ರ ಸರ್ಕಾರಿ ಕಛೇರಿಗಳ ಗಮನಕ್ಕೆ ತರಲು ಉಪವಿಭಾಗಾಧಿಕಾರಿಗಳಲ್ಲಿ ವಿನಂತಿಸಿದರು.

ಮುಂದುವರಿದಂತೆ, ಉಪವಿಭಾಗಾಧಿಕಾರಿಗಳು ಗ್ರಾಮ ಪಂಚಾಯತಿಯಿಂದ ಸಾಮಾನ್ಯ ಪರವಾನಿಗೆ ಪಡೆಯುವುದು ಮತ್ತು ರಾಜಧನ ಪಾವತಿಸುವುದು ಕಡ್ಡಾಯವಾಗಿದೆಯೆಂದು ತಿಳಿಸಿದರು. ಇದಕ್ಕೆ ಉತ್ತರಿಸಿದ ಶ್ರೀ.ಬಸವರಾಜುರವರು, ತಮ್ಮ ಬೇಡಿಕೆಯು ರಾಜಧನ ಪಾವತಿಸುವ ಕುರಿತಾಗಿರದೇ, ಸಾಮಾನ್ಯ ಪರವಾನಿಗೆ ಪಡೆಯುವ ಸಂದರ್ಭದಲ್ಲಿ ಪಾವತಿಸಬೇಕಾಗಿರುವ ಶುಲ್ಕದ ಕುರಿತಾಗಿದೆಯೆಂದು ಸ್ಪಷ್ಟಪಡಿಸಿದರು. ಅಲ್ಲದೇ, ಜಿಲ್ಲಾ ಖನಿಜ ನಿಧಿ (DMF) ಯನ್ನು ಕ್ವಾರಿ ಚುಟುವಟಿಕೆಗಳಿಂದ ಹಾನಿಗೊಳಗಾದ ಪ್ರದೇಶಗಳಿಗೆ ಮತ್ತು ಸುತ್ತಮುತ್ತಲಿನ ಗ್ರಾಮಗಳಿಗೆ ಮಾತ್ರ ವಿನಿಯೋಗಿಸಬೇಕೆಂದು ಆಗ್ರಹಿಸಿದರು. ಸದರಿ ವಿಷಯದ ಪ್ರಸ್ತಾಪನೆಯ ವೇಳೆ ಗಣಿಗಾರಿಕೆಯೇ ಇಲ್ಲದ ಯಲಹಂಕ ತಾಲ್ಲೂಕಿನಲ್ಲಿ ಜಿಲ್ಲಾಖನಿಜ ನಿಧಿಯನ್ನು ಬಳಸಿಕೊಂಡಿರುವ ಬಗ್ಗೆ ಉದಾಹರಣೆಯನ್ನು ನೀಡಿದರು. ಇದಕ್ಕೆ ಉತ್ತರಿಸಿದ ಉಪವಿಭಾಗಾಧಿಕಾರಿಗಳು ಸ್ಥಳೀಯ ಪೀಡಿತ ಪ್ರದೇಶಕ್ಕೆ ಮಾತ್ರ ಜಿಲ್ಲಾ ಖನಿಜ ನಿಧಿಯ ಹಣವನ್ನು ಬಳಕೆ ಮಾಡುವಂತೆ ಮಾನ್ಯ ಜಿಲ್ಲಾಧಿಕಾರಿಗಳ ಗಮನಕ್ಕೆ ತರುವ ಕುರಿತು ಶ್ರೀ.ಬಸವರಾಜುರವರಿಗೆ ಭರವಸೆ ನೀಡಿದರು.

4. **ಶ್ರೀ.ಬಿ.ವಿಜಯ ರೆಡ್ಡಿ, ಪರಿಸರವಾದಿಗಳು, ಶಕ್ತಿ ಎನ್ವಿರಾನ್‌ಮೆಂಟ್, ರೂರಲ್ ಡೆವೆಲಪ್‌ಮೆಂಟ್ ಸೊಸೈಟಿ, ಬಳ್ಳಾರಿ.**

ಶ್ರೀ.ಮುತ್ತುರಾಜ್ ಮತ್ತು ಶ್ರೀ.ಧನರಾಜ್‌ರವರುಗಳು ಮಾತನಾಡಿ ಸದರಿ ಸಾರ್ವಜನಿಕ ಪರಿಸರ ಆಲಿಕೆಯ ಸಭೆಯ ಕುರಿತಂತೆ ನೀಡಿದ ಪ್ರಚಾರದ ಕೊರತೆಯ ಬಗ್ಗೆ ಹೇಳಿದ್ದಾರೆ. ಹಾಗಾಗಿ, ಸಾರ್ವಜನಿಕ ಪರಿಸರ ಆಲಿಕೆಯ ಸಭೆಗೆ ಇನ್ನಷ್ಟು ಪ್ರಚಾರದ ಅವಶ್ಯಕತೆಯಿತ್ತೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಸದರಿ ಉದ್ದೇಶಿತ ಯೋಜನೆಗೆ ಹೂಡುತ್ತಿರುವ ಬಂಡವಾಳದ ಶೇ.2 ರಷ್ಟನ್ನು ಸಿ.ಎಸ್.ಆರ್ (ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿ) ನಿಧಿಗೆ ಬಳಸಬೇಕಾಗುತ್ತದೆ. ಅಂದರೆ ಸುಮಾರು ರೂ.2.46 ಲಕ್ಷಗಳಷ್ಟಾಗುತ್ತದೆ, ಅದೇ ರೀತಿ 15 ಕ್ಕೂ ಹೆಚ್ಚು ಇದೇ ತರಹದ

ಗಣಿಗಾರಿಕೆಗಳು ಸೂಲಿವಾರ ಗ್ರಾಮದ ವ್ಯಾಪ್ತಿಯಲ್ಲಿ ನಡೆಯುತ್ತಿದ್ದು, ಸಂಬಂಧಿಸಿದ ಗ್ರಾಮ ಪಂಚಾಯತ್‌ನವರು ಸಮನ್ವಯ ಸಮಿತಿ ಸ್ಥಾಪಿಸಿ, ಸದರಿ ಸಿ.ಎಸ್.ಆರ್ ನಿಧಿಯನ್ನು ಸಮರ್ಪಕವಾಗಿ ಬಳಸಲು ಯೋಜನೆ ರೂಪಿಸಲು ಮುಂದಾಗಬೇಕು ಎಂದು ಸಲಹೆ ನೀಡಿದರು. ಅಲ್ಲದೇ, ತಮಗೆ ಅನಿಸಿಕೆ ವ್ಯಕ್ತಪಡಿಸಲು ಅನುಮತಿ ನೀಡಿದ ಎಲ್ಲರಿಗೂ ಕೃತಜ್ಞತೆ ಸಮರ್ಪಿಸಿದರು.

ಪ್ರತಿಯಾಗಿ, ಉಪವಿಭಾಗಾಧಿಕಾರಿಗಳು ಶ್ರೀ.ಬಿ.ವಿಜಯ ರೆಡ್ಡಿ, ಪರಿಸರವಾದಿಗಳು ಇವರನ್ನು ಉತ್ತಮ ಸಲಹೆ ನೀಡಿದ್ದಕ್ಕಾಗಿ ಪ್ರಶಂಸಿಸಿ, ಸದರಿ ಸಲಹೆಯನ್ನು ಮಾನ್ಯ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಸಿ.ಎಸ್.ಆರ್ ಮತ್ತು ಡಿ.ಎಂ.ಎಫ್ ನಿಧಿಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿಯ ಸಮನ್ವಯದೊಂದಿಗೆ ಸಮರ್ಪಕವಾಗಿ ಬಳಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಮುಂದುವರಿದಂತೆ, ಶ್ರೀ.ಬಸವರಾಜು, ಅಧ್ಯಕ್ಷರು, ಚಿಕ್ಕನಹಳ್ಳಿ ಗ್ರಾಮ ಪಂಚಾಯತ್ ಇವರು ಪ್ರಸ್ತಾಪಿಸಿದ್ದ ಎಲ್ಲಾ ಅಂಶಗಳು ಅತ್ಯಂತ ಪ್ರಮುಖವಾಗಿದ್ದು, ಸ್ಥಳೀಯ ಸಂಸ್ಥೆಗಳು ಸ್ಥಳೀಯ ಭಾಗದ ಪ್ರದೇಶಗಳ ಅಭಿವೃದ್ಧಿಯಲ್ಲಿ ಮತ್ತು ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ತಿಳಿಸಿದರು. ಅಲ್ಲದೇ, ಸಭೆಯಲ್ಲಿ ಭಾಗವಹಿಸಿದ್ದ ಕ್ವಾರಿ ಮಾಲೀಕರನ್ನು ಉದ್ದೇಶಿಸಿ ಮಾತನಾಡಿ ಗ್ರಾಮ ಪಂಚಾಯತಿಗಳು ಸರ್ಕಾರದ ಪ್ರಮುಖ ಆಧಾರ ಸ್ತಂಭವಾಗಿದ್ದು, ಗ್ರಾಮ ಪಂಚಾಯತಿಯ ಅಧಿಕಾರಿಗಳು ಸಮಾಜದ ಒಳಿತಿಗಾಗಿ ಶ್ರಮಿಸುವವರಾಗಿರುತ್ತಾರೆ. ಹಾಗಾಗಿ, ಯಾವುದೇ ಅಧಿಕಾರಿ/ಸಿಬ್ಬಂಧಿ ತೆರಿಗೆ ಸಂಗ್ರಹಿಸಲು ಆಗಮಿಸಿದಾಗ ಗೌರವಯುತವಾಗಿ ನಡೆದುಕೊಳ್ಳುವಂತೆ ತಿಳಿಸಿದರು. ತದನಂತರ, ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಸಾರ್ವಜನಿಕರು ಆಲಿಕೆ ಸಭೆಯಲ್ಲಿ ವ್ಯಕ್ತಪಡಿಸಿದ ಆಕ್ಷೇಪಣೆಗಳು, ಅನಿಸಿಕೆಗಳು, ಅಭಿಪ್ರಾಯಗಳನ್ನು ಹಾಗೂ ಜ್ಞಾಪನ ಪತ್ರಗಳನ್ನು ಮುಂದಿನ ಅಗತ್ಯ ಕ್ರಮಕ್ಕಾಗಿ ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧೀಕಾರ (SEIAA) ಕ್ಕೆ ನಡವಳಿ ಮುಖಾಂತರ ರವಾನಿಸಲಾಗುವುದೆಂದು ತಿಳಿಸಿದರು.

ಸದರಿ ಉದ್ದೇಶಿತ ಯೋಜನೆಗೆ ಸಂಬಂಧಿಸದಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ, ಪ್ರಾದೇಶಿಕ ಕಛೇರಿ, ರಾಜರಾಜೇಶ್ವರಿ ನಗರ ಇಲ್ಲಿ ಸ್ವೀಕೃತವಾದ 04 ಜ್ಞಾಪನಾ ಪತ್ರಗಳನ್ನು **ಅನುಬಂಧ-04** ರಲ್ಲಿ ಲಗತ್ತಿಸಿದೆ.

ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ, ರಾಜರಾಜೇಶ್ವರಿ ನಗರ ಇವರು ಮಾತನಾಡಿ ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧೀಕಾರ (SEIAA)ವು ಕೇಂದ್ರ ಸರ್ಕಾರದ ಅಧೀನ ಸಂಸ್ಥೆಯಾಗಿದ್ದು, ಸದರಿ ಸಂಸ್ಥೆಯು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ನೋಡಲ್ ಏಜೆನ್ಸಿಯಾಗಿ ನೇಮಿಸಿ, ಈ ಸಾರ್ವಜನಿಕ ಸಭೆಯನ್ನು ನಡೆಸುವ ಜವಾಬ್ದಾರಿಯನ್ನು ನೀಡಿದೆಯೆಂದು ಸಭೆಗೆ ತಿಳಿಸಿದರು. ಸದರಿ ಸಭೆಯು ಪರಿಸರ ಆಘಾತ ಅಧ್ಯಯನ ಅಧಿಸೂಚನೆ, 2006 ರ ಅನ್ವಯ ಆಯೋಜಿಸಲಾಗಿದ್ದು, ಶ್ರೀ.ಬಸವರಾಜು, ಚಿಕ್ಕನಹಳ್ಳಿ ಗ್ರಾಮ ಪಂಚಾಯತ್

ಇವರು ತಿಳಿಸಿದಂತೆ ಮುಂದಿನ ದಿನಗಳಲ್ಲಿ ಸಾರ್ವಜನಿಕ ಆಲಿಕೆ ಸಭೆಗೆ ಹೆಚ್ಚಿನ ಪ್ರಚಾರ ನೀಡಲು ಅನುವಾಗುವಂತೆ ಅಗತ್ಯ ಕ್ರಮ ವಹಿಸಲಾಗುವುದೆಂದು ತಿಳಿಸಿದರು.

ಅಂತಿಮವಾಗಿ, ಪ್ರಾದೇಶಿಕ ಕಛೇರಿ, ರಾಜರಾಜೇಶ್ವರಿ ನಗರ ಇವರು ಸದರಿ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಿಕೊಟ್ಟ ಮಾನ್ಯ ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ, ಬೆಂಗಳೂರು ಇವರಿಗೆ ಧನ್ಯವಾದಗಳನ್ನು ಅರ್ಪಿಸಿದರು. ಅಂತೆಯೇ, ಶ್ರೀ. ಎಸ್. ಕೆ.ವಾಸುದೇವ್, ವಲಯ ಹಿರಿಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ದಕ್ಷಿಣ ವಲಯ, ಬೆಂಗಳೂರು ಹಾಗೂ ಸಭೆಯಲ್ಲಿ ಹಾಜರಿದ್ದ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಚಿಕ್ಕನಹಳ್ಳಿ ಗ್ರಾಮ ಪಂಚಾಯತಿಯ ಅಧ್ಯಕ್ಷರು, ಗ್ರಾಮ ಪಂಚಾಯತಿಯ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು, ಉದ್ದೇಶಿತ ಯೋಜನೆಯ ಪ್ರತಿನಿಧಿಗಳನ್ನು, ಸಾರ್ವಜನಿಕರನ್ನು, ರಾಜ್ಯದ ಬೇರೆ ಬೇರೆ ಪ್ರದೇಶದಿಂದ ಆಗಮಿಸಿದ ಪರಿಸರವಾದಿಗಳು, ರೈತ ಬಾಂಧವರನ್ನು, ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳನ್ನು ಹಾಗೂ ಎಲ್ಲಾ ಮಾಧ್ಯಮ ಮಿತ್ರವರ್ಗದವರನ್ನು ಸಾರ್ವಜನಿಕ ಆಲಿಕೆ ಸಭೆಯನ್ನು ಸುಗಮವಾಗಿ ನಡೆಸಲು ಸಹಕರಿಸಿದ ಸರ್ವರಿಗೂ ಹೃದಯಪೂರ್ವಕವಾಗಿ ವಂದಿಸಿದರು.

ಪರಿಸರ ಸಾರ್ವಜನಿಕ ಆಲಿಕೆ ಸಭೆಯು ಮಧ್ಯಾಹ್ನ 01.20 ಕ್ಕೆ ಮುಕ್ತಾಯವಾಯಿತು. ಸಾರ್ವಜನಿಕ ಸಭೆಯ ಛಾಯ ಚಿತ್ರಗಳು ಮತ್ತು ವೀಡಿಯೋಗ್ರಾಫ್‌ಗಳನ್ನು **ಅನುಬಂಧ – 05** ರಲ್ಲಿ ಲಗತ್ತಿಸಿದೆ.

(ಶ್ರೀ.ರಘುನಂದನ್.ಎ.ಎನ್. ಕ.ಆ.ಸೇ)
**ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ**
**ಉಪ ವಿಭಾಗ ಮತ್ತು ಪರಿಸರ ಸಾರ್ವಜನಿಕ ಆಲಿಕೆ**
**ಸಮಿತಿಯ ಅಧ್ಯಕ್ಷರು, ಬೆಂಗಳೂರು ನಗರ ಜಿಲ್ಲೆ**